

# ಅಮ್ಮು ಮತ್ತು ಚಿಟ್ಟೆಗಳು

■ ಚಂದನ ಜಿ.ಪಿ., ಹೊನ್ನಾಳಿ

ಪುಟಾಣಿ ಅಮ್ಮು ಬಿಡಿಸಿದನೊಂದು
ಸುಂದರವಾದ ಚಿತ್ರವನು
ಗಿರಿಗಳ ಸಾಲು, ಬೆಳಗುವ ಸೂರ್ಯ
ಮರಗಳ ನಡುವಲಿ ಮನೆಯೊಂದು
ಹಾರುವ ಹಕ್ಕಿ, ಬಣ್ಣದ ಹೂಗಳು
ಝುಳು ಝುಳು ಹರಿಯುವ ತೊರೆಯೊಂದು

ಬಣ್ಣವ ಬಳಿಯಲು ಬಣ್ಣಗಳಿಲ್ಲ
ಅಮ್ಮನ ಕೇಳೆ, ತಂದುಕೊಡುವೆನು ನಾಳೆ
ಬೇರೆ ಆಟವ ಆಡಿಕೋ ಎಂದರು
ಹಟವನು ಹೂಡಿ ಪಟವನು ಹಿಡಿದು
ಕುಳಿತನು ಹಿತ್ತಲ ಹೂದೋಟದಲಿ

ಹಾರುತ ಬಂದವು ಚಿಟ್ಟೆಗಳೆರೆಡು
ಅಮ್ಮುನ ಸಪ್ಪೆ ಮೋರೆಯ ಕಂಡು
ಭುಜದ ಮೇಲೆ ಕುಳಿತುಕೊಂಡು
ಬಿಡಿಸಿದ ಸುಂದರ ಪಟವನು ಕಂಡು
ನಡೆದ ವಿಷಯವ ಆಲಿಸಿಯೋಚಿಸಿ
ಕರೆದರು ಗೆಳಯರ ಸಿಳ್ಳೆ ಹೊಡೆದು

ಹಾರುತ ಬಂದವು ನೂರಾರು
ಬಣ್ಣ ಬಣ್ಣದ ಚಿಟ್ಟೆಗಳು
ಒಂದೊಂದಾಗಿ ಹಾರುತ ಬಂದು
ಚಿತ್ರದ ಮೇಲೆ ರೆಕ್ಕೆಯ ಬಡಿದು
ಹಳದಿ ಹಸಿರು ಕೆಂಪು ನೀಲಿ

ವಿಧ ವಿಧವಾದ ಬಣ್ಣವ ಬಳಿದು
ಬಣ್ಣದ ಲೋಕವೆ ಮೂಡಿತ್ತು
ನಿಸರ್ಗವೇ ಚಿತ್ರದಿ ಕುಳಿತಿತ್ತು
ಅಮ್ಮುನ ಮೊಗದಲಿ ನಗುವಿತ್ತು ■

# ಅಪಾತ್ರ ದಾನ

■ ಕೆ. ಆದಿತ್ಯ ಹೆಬ್ಬಾರ್, ಹರಪನಹಳ್ಳಿ

ಕಾಡಿನ ಅಂಚಿನಲ್ಲಿ ಋಷಿಮುನಿಗಳೊಬ್ಬರು ಆಶ್ರಮ ನಿರ್ಮಿಸಿ ತಪಸ್ಸಿನಲ್ಲಿ ನಿರತರಾಗಿದ್ದರು. ಅವರೊಂದಿಗೆ ಹಲವು ಪಕ್ಷಿ, ಪ್ರಾಣಿಗಳು ಆಶ್ರಮದಲ್ಲಿ ವಾಸವಾಗಿದ್ದು ಋಷಿಯ ಆರೈಕೆಯಲ್ಲಿ ಸುಖದಿಂದಿದ್ದವು.

ಒಂದು ದಿನ ಚಿರತೆಯೊಂದು ಆಶ್ರಮದೊಳಕ್ಕೆ ಬಂದು ಮುನಿಗಳ ಸಾಕು ನಾಯಿಯ ಮೇಲೆ ಆಕ್ರಮಣ ಮಾಡಿತು. ನಾಯಿ ಭಯದಿಂದ ಕೂಗುತ್ತಾ ಓಡೋಡಿ ಋಷಿಗಳ ಬಳಿ ಬಂದು ಕಾಪಾಡೆಂದು ಮೊರೆಯಿಟ್ಟಿತು. ಋಷಿಗಳು ತಮ್ಮ ತಪಃಶಕ್ತಿಯಿಂದ ಮಂತ್ರಿಸಿ ಆ ನಾಯಿಯನ್ನು ಹುಲಿಯನ್ನಾಗಿ ಮಾಡಿಬಿಟ್ಟರು. ಹುಲಿಯಾದ ನಾಯಿ ಚಿರತೆಯನ್ನು ಓಡಿಸುತ್ತಾ ಕಾಡಿನೊಳಕ್ಕೆ ಹೋಯಿತು. ಅಶಕ್ತ ಪ್ರಾಣಿಗಳನ್ನು ಬೇಟೆಯಾಡಿ ತಿನ್ನಲಾರಂಭಿಸಿತು. ಅದೊಂದು ದಿನ ಆನೆಯೊಂದು ಎದುರಾಗಿ ಹುಲಿಯನ್ನು ತನ್ನ ಸೊಂಡಿಲಿನಿಂದ ಎತ್ತಿ ದೂರ ಎಸೆಯಿತು. ಹುಲಿಯಾಗಿದ್ದ ನಾಯಿಗೆ ಪುನಃ ತಾನು ಅಶಕ್ತ ಎಂಬ ಭಾವನೆ ಮೂಡಿ ಮತ್ತೆ ಋಷಿಗಳ ಬಳಿ ಬಂದು ಗುರುಗಳೇ, ನನ್ನನ್ನು ಆನೆಯನ್ನಾಗಿ ಮಾಡಿ ಎಂದು ಪ್ರಾರ್ಥಿಸಿತು. ಗುರುಗಳು ಕರುಣೆಯಿಂದ ಹುಲಿರೂಪದಲ್ಲಿದ್ದ ನಾಯಿಯನ್ನು ಆನೆಯನ್ನಾಗಿ ಮಾಡಿದರು.

ಆನೆಯಾಗಿದ್ದ ನಾಯಿ ಕಾಡಿನಲ್ಲಿ ರಾಜಾರೋಷವಾಗಿ ಓಡಾಡುತ್ತಾ ಒಂದು ಗುಹೆಯ ಬಳಿ ಬಂದಿತು. ಯಾರಿದ್ದೀರಿ ಒಳಗೆ? ಎಂದು ಹೇಷಾರವಗೈದಿತು (ಘೀಳಿಟ್ಟಿತು).




ಗುಹೆಯೊಳಗಿದ್ದ ಸಿಂಹವೊಂದು ಹೊರಬಂದು ಕೋಪದಿಂದ ಆನೆಯ ತಲೆಯ ಮೇಲೆ ಹಾರಿ ತನ್ನ ಪಂಜದಿಂದ ಬಲವಾದ ಪೆಟ್ಟು ಕೊಟ್ಟಿತು.

ಆನೆಯ ಜಂಘಾಬಲವೇ ಉಡುಗಿತು. ದಾಪುಗಾಲಿಟ್ಟು ಓಡಿ ತಪ್ಪಿಸಿಕೊಂಡು ಮತ್ತೆ ಋಷಿಗಳ ಪಾದದ ಬಳಿ ಕುಳಿತು ಕೇಳಿತು. ಸ್ವಾಮಿ, ನನ್ನನ್ನು ಸಿಂಹವನ್ನಾಗಿ ಮಾಡಿ, ಈಗಲೂ ಋಷಿಗಳು ವಿಚಲಿತರಾಗದೇ ಮಂತ್ರದಂಡವನ್ನೆತ್ತಿ ಹರಸಿ ಸಿಂಹವನ್ನಾಗಿಸಿದರು. ಸಿಂಹವಾದ ನಾಯಿ ಗರ್ಜಿಸುತ್ತಾ ಕಾಡಿನೊಳಕ್ಕೆ ಪಯಣ ಬೆಳೆಸಿತು. ಇದೀಗ ಮೃಗರಾಜನೆನಿಸಿದ ನಾಯಿಗೆ ಬೆಟ್ಟದಷ್ಟು ಧೈರ್ಯ. ಯಾವುದೇ ಪ್ರಾಣಿಗಳನ್ನು ನಾನು ಎದುರಿಸಬಲ್ಲೆ ನನಗೆ ಯಾರೂ ಸಮರಿಲ್ಲ. ಅದರ ಮನದಲ್ಲಿ ಒಂದು ಯೋಚನೆ ಮೂಡಿತು. ಋಷಿಗಳು ಈ ಅಶಕ್ತ ಪ್ರಾಣಿಗಳನ್ನೆಲ್ಲ ಸಬಲರನ್ನಾಗಿಸಿಬಿಟ್ಟರೆ ನನ್ನ ಆಹಾರಕ್ಕೆ ತೊಂದರೆಯಾಗುತ್ತದೆ. ನನ್ನ ಸಾರ್ವಭೌಮತ್ವ ಅಭಾದಿತವಾಗಬೇಕಾದರೆ ಈ ಋಷಿ ಮುನಿಗಳನ್ನೇ ಕೊಲ್ಲಬೇಕು. ಹೀಗೆ ಯೋಚಿಸಿದ ಸಿಂಹ ರೂಪದ ನಾಯಿ ಆಶ್ರಮದೆಡೆಗೆ ದೌಡಾಯಿಸಿತು. ತಪಸ್ಸಿನಲ್ಲಿ ನಿರತರಾಗಿದ್ದ ಮುನಿಗಳು ದಿವ್ಯದೃಷ್ಟಿಯಿಂದ ತಾವು ಸಾಕಿದ ನಾಯಿ ತನ್ನನ್ನು ಕೊಲ್ಲಲು ಧಾವಿಸಿ ಬರುತ್ತಿರುವುದನ್ನು ಅರಿತರು. ಹತ್ತಿರ ಬಂದು ಹಾರಲು ಸಿದ್ಧವಾಗಿದ್ದ ಸಿಂಹವನ್ನು ಮಂತ್ರ ಸಿಂಚನದಿಂದ ಸಾಯಿಸಿದರು. ಹಾಗಾಗಿ ಯಾವುದೇ ಸಂದರ್ಭದಲ್ಲಿ ಅಪಾತ್ರ ದಾನ ಸಲ್ಲದು. ಕಳುಹಿಸಿದವರು. ■